ಶ್ರೀ ಶೀರ್ನಾಳಿ ಚಂದ್ರಶೇಖರ್.—ನನ್ನ ಮೂಲ ನಿರ್ಣಯದಲ್ಲಿ ಅಂತರ್ಜಾತಿ ವಿವಾಹವಾದವರಿಗೆ ಉದ್ಯೋಗದಲ್ಲಿ ಮೀಸಲಿಡಬೇಕೆಂದು ಅರಿಕೆ ಮಾಡಿದ್ದು. ಇದನ್ನು ತಾವು ಯೋಚನೆ ಮಾಡಿದಿ ೀರಾ ? ಜೊತೆಗೆ ಜಿಲ್ಲಾವಾರು ಎಷ್ಟೆಷ್ಟು ಮದುವೆಗಳಾಗಿವೆ ಮತ್ತು ಐದು ಸಾವಿರ ರೂಪಾಯಿಗಳ ಪ್ರೋತ್ಸಾಹ ಧನವನ್ನು ಯಾರು ಯಾರಿಗೆ ಕೊಡಲಾಗಿದೆ ಎಂದು ತಿಳಿಸುವಿರಾ ?

ಶ್ರೀ ವೈ. ರಾಮಕೃಷ್ಣ.—ಈ ಪ್ರಶ್ನೆಗೆ ನಾನು ಈಗಾಗಲೇ ನಾನು ಉತ್ತರ ಕೊಟ್ಟಿದ್ದೆ ನೆ. ಇನ್ನು, ಹುದ್ದೆಗಳನ್ನು ಮೀಸಲಿಡುವ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಹರಿಜನರ ಹೆಣ್ಣು ಮದುವೆ ಆದವರಿಗೆ ಮಾತ್ರ ಕೊಡುತ್ತೀರೆ ೀ ? ವೈಸಾ ವರ್ಸಾ ಇದೆಯೋ ?

ಶ್ರೀ ವೈ. ರಾಮಕೃಷ್ಣ.—ವೈಸಾ ವರ್ಸಾ ಇದೆ. ಬೆಂಗಳೂರಿನಲ್ಲಿ ೭, ಕೋಲಾರದಲ್ಲಿ ಒಂದು, ತುಮಕೂರಿನಲ್ಲಿ ಎರಡು, ಶಿವಮೊಗ್ಗದಲ್ಲಿ ಎರಡು, ಮೈಸೂರಿನಲ್ಲಿ ಒಂದು. ದಕ್ಷಿಣ ಕನ್ನಡದಲ್ಲಿ ಒಂದು, ಚಿಕ್ಕಮಗಳೂರಿನಲ್ಲಿ ಎರಡು, ಗುಲ್ಬರ್ಗದಲ್ಲಿ ಒಂದು, ಧಾರವಾಡದಲ್ಲಿ ಒಂದು ಒಟ್ಟು ೧೮ ಮದುವೆಗಳಾಗಿವೆ. ಈ ಮದುವೆಗಳಿಗಾಗಿ ೮೦–೮೧ ನೇ ಸಾಲಿನಲ್ಲಿ ಕೊಟ್ಟಿರತಕ್ಕಂಥ ಹಣ ೬೯,೦೦೦ ರೂಪಾಯಿಂ ಗಳು.

ಶ್ರೀ ಟಿ.ಬಿ. ಜಯಚಂದ್ರ.—ಸ್ವಾಮಿ, ನನ್ನ ಜೊತೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಲಿಂಗಾಯಿತ ಮಿತ್ರರಿಗೆ ನಾನೇ ಮುಂದೆ ನಿಂತುಕೊಂಡು ಮದುವೆ ಮಾಡಿಸಿದ್ದೆ ನೆ. ಇನ್ನು ಕೂಡ ಅವರಿಗೆ ಸಹಾಯ ಸಿಕ್ಕಿಲ್ಲ. ಅವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೇ, ೮,೦೦೦ ರೂಪಾಯಿ ಮೇಲ್ಪಟ್ಟು ವರಮಾನ ಇದ್ದರೆ ಕೊಡುವುದಕ್ಕೆ ಬರುವುದಿಲ್ಲ, ಇದನ್ನೆಲ್ಲಾ ನೋಡಬೇಕಾಗುತ್ತದೆ.

Veterinary Hospitals in Kollegal Taluk

396 SRI G. RAJUGOWDA (Hanur)—Will the Minister for Law, Parliamentary Affairs & Veterinary & Animal Husbandry be pleased to state :—

(a) the number of live-stock in Kollegal Taluk ;

(b) the number of Veterinary Hospitals ought to have been there, in proportionate with the number of Live-stock as per the norms of the Government ;

(c) whether it has come to the notice of the Government that due to non-existence of Veterinary Hospitals, many Live-stocks are being dying every year due to bad diseases ;

(d) the names of the places of this Taluk where and when Government has decided to open Veterinary Hospitals ?

SRI Y. RAMAKRISHNA Minister for Law, Parliamentary Affairs & Veterinary & Animal Husbandry) —

(a) 1,34,977.

(b) 13.

(c) Precautionary measures are being taken to prevent whenever the epidemic disease spreads ;

(d) The matter of opening Veterinary Hospitals at Ajjapura & Marath Hally is under consideration.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಕೊಳ್ಳೇಗಾಲ ತಾಲ್ಲೂಕಿನಲ್ಲಿ ೧,೩೪೪೬೬ ಜಾನುವಾರುಗಳನ್ನು ಗಣತಿ ಮಾಡಿದ್ದಾರೆಂದು ತಿಳಿಸಿದ್ದೀರಿ. ಈ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಪಶುವೈದ್ಯ ಶಾಲೆಗಳಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಒಮ್ಮೆ ಇಸವಿಯಲ್ಲಿ ಮಾಡಿದ ಗಣತಿಯ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇವೆ. ಆದರ ಪ್ರಕಾರ ಕೆಲವಾರು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೆಲವು ಕಡೆ ಸಬ್ ಸೆಂಟರ್‌ಗಳು ಇವೆ. ಇನ್ನೂ ಬೇಕೆಂದು ಕೇಳಿದ್ದಾರೆ. ಆಸ್ಪತ್ರೆಗಳನ್ನು ಕೊಡುವುದಕ್ಕೆ ಸರ್ಕಾರಕ್ಕೆ ಬಾಧಕ ಇಲ್ಲ. ಆದರೆ, ವೈದ್ಯರುಗಳ ಅಭಾವವಿರುವುದರಿಂದ ಕೊಡುವುದಕ್ಕಾಗಿಲ್ಲ, ಸಾಕಷ್ಟು ಸಂಖ್ಯೆಯಲ್ಲಿ ವೈದ್ಯರುಗಳು ಬಂದಕೂಡಲೇ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ.—ಜಾನುವಾರುಗಳ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ? ಎಲ್ಲೆಲ್ಲಿ ಪಶುವೈದ್ಯ ಶಾಲೆಗಳಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಜಾನುವಾರುಗಳ ಸಂಖ್ಯೆ ೧೦ ಪರ್ಸೆಂಟ್ ಜಾಸ್ತಿಯಾಗಿದೆ. ಪಶುವೈದ್ಯ ಶಾಲೆಗಳು ಇರತಕ್ಕ ಪಿವರ ನನ್ನ ಹತ್ತಿರ ಇಲ್ಲ, ಒದಗಿಸುತ್ತೇನೆ.

ಶ್ರೀ ಜಿ. ರಾಜುಗೌಡ.—ಸರ್ಕಾರದ ಧೋರಣೆ ಪ್ರಕಾರ, ಹತ್ತು ಸಾವಿರ ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ಇದೆ, ಆದರ ಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸು ಪ್ರಕಾರ ಹತ್ತು ಸಾವಿರ ದನಕರುಗಳಿಗೆ ಒಂದು ಆಸ್ಪತ್ರೆ ಇರಬೇಕು. ಆದರೆ, ನಾವು ೭೦೦೦ ಜಾನುವಾರುಗಳಿಗೆ ಒಂದು ಆಸ್ಪತ್ರೆ ಕೊಟ್ಟಿದ್ದೇವೆ. ಸರ್ಕಾರಕ್ಕೆ ಅವಶ್ಯಕತೆ ಇದೆಯೆಂದು ಮನಗಂಡರೆ ಆಸ್ಪತ್ರೆಗಳನ್ನು ಕೊಡುವುದಕ್ಕೆ ತಯಾರಾಗಿದೆ. ವೈದ್ಯರುಗಳ ಅಭಾವ ಇರುವುದರಿಂದ ಕೊಡುತ್ತಿಲ್ಲ.

ಶ್ರೀ ಜಿ. ರಾಜುಗೌಡ.—೧,೩೪೪೬೬ ಜಾನುವಾರುಗಳಿರತಕ್ಕ ಕೊಳ್ಳೇಗಾಲ ತಾಲ್ಲೂಕಿಗೆ ಆದರ ಪ್ರಕಾರ ೧೮-೧೯ ಆಸ್ಪತ್ರೆಗಳನ್ನು ತೆರೆಯಬೇಕಾಗಿತ್ತು. ಆ ರೀತಿ ಆಸ್ಪತ್ರೆಗಳನ್ನು ಕೊಟ್ಟಿಲ್ಲ, ಇವತ್ತು ಬಹಳಷ್ಟು ಜಾನುವಾರುಗಳು ಕಾಯಿಲೆಗಳಿಗೆ ತುತ್ತಾಗಿ ಅಸುನೀಗಿದ್ದಾವೆ. ದಯಮಾಡಿ ನಮ್ಮ ತಾಲ್ಲೂಕಿನಲ್ಲಿ ಪಂಚಾಯ್ತಿಯವರು ಕಟ್ಟಿಡ ಕಟ್ಟಿಕೊಳ್ಳುವ ಕಡೆಗಾದರೂ ಆಸ್ಪತ್ರೆಗಳನ್ನು ಕೊಡುವ ಬಗ್ಗೆ ಭರವಸೆ ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಅಜ್ಜಂಪುರ ಮತ್ತು ಮಾರತ್‌ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ಕೊಡಬೇಕೆಂದು ಆಲೋಚನೆ ಮಾಡಲಾಗಿದೆ. ಸಾಧ್ಯವಿದ್ದ ಕಡೆಗಳಲ್ಲಿ ಕೊಡುತ್ತೇನೆ.

ಶ್ರೀ ಡಿ.ಟಿ. ರಾಮು.—ವಿಶೇಷ ಜಾನುವಾರು ತಳಿಗಳಿಗೆ ಸಾಂಕ್ರಾಮಿಕ ರೋಗಗಳು ಹರಡಿ, ಅಧಿಕ ಸಂಖ್ಯೆಯಲ್ಲಿ ಜಾನುವಾರುಗಳು ಸಾಯುತ್ತವೆ. ಹಳ್ಳಿಗಾಡಿಗೆ ವಿಶೇಷ ತರಬೇತಿ ಹೊಂದಿದ ವೈದ್ಯರುಗಳನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ ?

ಶ್ರೀ ವೈ. ರಾಮಕೃಷ್ಣ.— ಸ್ವಾಮಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದಕ್ಕಾಗಿ ವಿಶೇಷವಾಗಿ ಸಂಚಾರ ವಾಹನಗಳನ್ನು ಒದಗಿಸಿದ್ದೇವೆ. ಕೆಲವಾರು ಜಿಲ್ಲೆಗಳಿಗೆ ಈ ಸೌಲಭ್ಯವನ್ನು ಒದಗಿಸಿದ್ದೇವೆ. ಇದರಲ್ಲಿ ಚುಚ್ಚು ಮದ್ದು, ಟ್ಯೂಬ್ಸ್‌ಗಳು, ಔಷಧಿ ಇರುವುದಲ್ಲದೆ, ವೈದ್ಯಕೀಯ ತಂಡವೂ ಕೂಡ ಇರುತ್ತದೆ. ಈ ವರ್ಷ ಕೂಡ ಕೆಲವಾರು ಜಿಲ್ಲೆಗಳಿಗೆ ಈ ಸೌಲಭ್ಯವನ್ನು ಕೊಡುತ್ತೇವೆ.

ಶ್ರೀ ಜಿ. ರಾಜುಗೌಡ.—ಕೆಂಕೆರೆಯಲ್ಲಿ ೪೧,೦೦೦ ರೂಪಾಯಿ ಕಟ್ಟಿಡ ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಲ್ಲಿಗೆ ಆದಷ್ಟು ಜಾಗ್ರತೆ ಪಶುವೈದ್ಯ ಶಾಲೆಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಕಟ್ಟಿಡ ಕಟ್ಟಿದರೆ ಓಪಿ ಕೊಳ್ಳುವುದಕ್ಕೆ ತಯಾರಾಗಿದ್ದೇವೆ.